



**ಎಡದಿಂದ ಬಲಕ್ಕೆ**

1. ಮನದ ತುಂಬ ಹರುಷ ಇದ್ದಾಗ ಕಾಣುವುದೆಲ್ಲ ಎಷ್ಟು ಸುಂದರ! 4
3. ಕರುವಿನ ಪೋಷಣಾ ಕಾರ್ಯಕ್ಕೆ ಅವರುಗಳ ನಡುವೆ ಒಂದು ಒಪ್ಪಂದ 3
4. ಮಲೆಯನ್ನು ಪುನಃ ಪುನಃ ಏರಿಳಿದಿದ್ದಕ್ಕೆ ಇಂಥ ಸೊಕ್ಕು 3
6. ಹರನಿಗೆ ಅರ್ಪಿಸಲೆಂದು ಕಾಯ್ದಿರಿಸಿದ್ದು ತೊಟ್ಟು ಜಲ 4
7. ಎದ್ದು ಹೋಗಿ ತಂದದ್ದೆಲ್ಲ ಸಿಕ್ಕ ಸಿಕ್ಕಂತೆ ಹೇಗೆ ಹೇಗೋ 4
9. ಕೆಲಸಕ್ಕೆ ಸಮಯವನ್ನು ಹೊಂದಿಸಿದ್ದು ಸ್ವಲ್ಪವೇ ಸಮಯ 4
12. ಹಲವಾರು ಬಣಗಳ ಎಲ್ಲರನ್ನೂ ಒಗ್ಗೂಡಿಸಿದ್ದು ಬರೀ ದುಡ್ಡಿನ ಶಕ್ತಿ 4
14. ಆತ ಬರಿಗೈಯಲ್ಲೇ ಬಂದಿರಲು ಕಾರಣ ಅವನೊಬ್ಬ ಬಡವ 3
15. ಹಾಳಾಗುವ ಸ್ಥಿತಿಯನ್ನು ಎಲ್ಲೆಲ್ಲೂ ತಲುಪುತ್ತಿದೆ ಈ ಸಾಗರ ರತ್ನ 3
16. ಗೋಣಿ ಚೀಲ ಮಾರುವ ಕಾರ್ಯ ಹಿಡಿದಿದ್ದಾನೆ ಆತನ ಸ್ನೇಹಿತ 4

**ಮೇಲಿನಿಂದ ಕೆಳಕ್ಕೆ**

1. ಮುನಿದವರು ಕಿರುಚಿದ್ದು; ಅದೇ ಶಬ್ದ ಮತ್ತೆ ಮತ್ತೆ ಕೇಳಿಸಿದ್ದು 4
2. ನೂರಾರು ಮಣಿಗಳನ್ನು ಪೋಣಿಸಿ ತಯಾರಿಸಿರುವ ಈ ವಸ್ತ್ರ ಎಷ್ಟು ಸುಂದರ! 4
3. ಕಾರ್ಯಕರ್ತರೆಲ್ಲ ಗುಂಪುಗೂಡಿದಲ್ಲಿ ಸೃಷ್ಟಿಕರ್ತನೇ ಕಂಡನೇ? 3
5. ಫಲಿತ ಏನೇ ಇರಲಿ, ತಲೆಕೆಳಗಾಗಿಯಾದರೂ ಆ ಸ್ಥಳವನ್ನು ಹೋಗಿ ಸೇರು 3
6. ನೀನು ಅಲ್ಲಿಗೆ ಹಾರಿಹೋಗಲಾಗುವುದಿಲ್ಲ; ಅದು ನಕ್ಷತ್ರಗಳ ಜನ್ಮ ನೆಲೆ 4
8. ದೇವರ ಪಲ್ಲಕ್ಕಿ ಇರುವ ಮಂಟಪದ ಬಾಗಿಲನ್ನು ಕಾಯುವವನೆಂದರೆ? 4
10. ಆ ಬಂಗಲೆಯಲ್ಲಿರುವ ಎಲ್ಲರಿಗೂ ಪ್ರಿಯವಾದದ್ದು ಈ ಖಾರ ಸಾಂಬಾರ 3
11. ಬಗಲು ತುಂಬಿರುವ ಈ ಬಗೆಯಲ್ಲಿ ಬೇಗ ಬೇಗ ಹೇಗೆ? 4
12. ಹರಹರಾ ಕೂಗುವಾಗ ಒಬ್ಬ ವಿಷ್ಣುವಾದರೆ...? 4
13. ತುಂಬಿದ ಹೊಳೆಗೆ ಈಜಲು ಬರುವವರ ಸಂಖ್ಯೆ ವಿರಳವೇನಿಲ್ಲ 3

## 30–10–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಪ್ರವಚನ 3. ಕಲಹ 4. ವರುಣ 6. ಅನುಮಾನ 7. ತ್ರಿವಿಕ್ರಮ 9. ಸಹಕಾರ 12. ಅಧ್ಯಾಪನ 14. ಸುಲಭ 15. ತತ್ತರ 16. ಯಶಸ್ಕರ

**ಮೇಲಿನಿಂದ ಕೆಳಕ್ಕೆ**

1. ಪ್ರಹಸನ 2. ನವರಾತ್ರಿ 3. ಕಮಾನು 5. ಣಮಕ್ರ (ಕ್ರಮಣ ತಲೆಕೆಳಗು) 6. ಅನಾಯಾಸ 8. ಮಹಾಧನ 10. ಹರಸು 11. ರಣಭಯ 12. ಅನಂತರ 13. ಪದರ

ಪ್ರಶ್ನಾಂಕಣ

# ಧರೆಗೆ ಎಷ್ಟಿವೆ ಚಂದ್ರರು?

ಇದಕ್ಕೆ ಸಾರ್ವತ್ರಿಕವಾದ ಉತ್ತರ ಒಂದೇ ಒಂದು. ಭೂಮಿಗೆ ಶಾಶ್ವತ ಸಂಗಾತಿಯಾಗಿರುವ, ಆಗಸದಲ್ಲಿ ದೃಗ್ಗೋಚರವಾಗಿರುವ, ಪೃಥ್ವಿಗೆ ಅಲಂಕಾರವೂ ಆಗಿರುವ, ಬೃಹದಾಕಾರದ, ಸುಂದರಾಕಾರದ ಚಂದ್ರ (ಚಿತ್ರಗಳಲ್ಲಿ ಗಮನಿಸಿ). ಆದರೆ ವಾಸ್ತವ ಏನೆಂದರೆ, ಪೃಥ್ವಿಗೆ ಕೆಲವು ಬಗೆಗಳ ಕೆಲವಾರು ಸಂಖ್ಯೆಗಳ ಚಂದ್ರರು ಇವೆ: ಮಿನಿ ಚಂದ್ರರು, ಅರೆ ಚಂದ್ರರು, ಟ್ರೋಜನ್ ಚಂದ್ರರು, ಕೃತಕ ಚಂದ್ರರು... ಇತ್ಯಾದಿ. ಭೂಮಿಯೊಡನೆ ಶಾಶ್ವತವಾಗಿ ಉಳಿಯದ, ಭೂಮಿಯ ಮೇಲೆ ಯಾವುದೇ ಪ್ರಭಾವ ಬೀರದ ಕುಬ್ಜ ಕಾಯಗಳು ಇವು. ಧರೆಯ ಇಂಥವೆಲ್ಲ ಚಂದ್ರರ ಸಂಕ್ಷಿಪ್ತ ಪರಿಚಯ:

- **ಮಿನಿ ಚಂದ್ರ:** ಕೆಲವಾರು ಪುಟ್ಟ ಅಲೆಮಾರಿ ಕ್ಷುದ್ರಗ್ರಹಗಳು ಆಕಸ್ಮಿಕವಾಗಿ ಭೂ ಗುರುತ್ವಕ್ಕೆ ಸಿಲುಕಿ ಭೂಮಿಯನ್ನು ಪರಿಭ್ರಮಿಸತೊಡಗುತ್ತವೆ. ಇಂತಹ ಮಿನಿ ಚಂದ್ರರು ಭೂಮಿಯ ಸುತ್ತ ಶಾಶ್ವತವಾಗಿ ಉಳಿಯುವುದಿಲ್ಲ; ಅನತಿ ಕಾಲದಲ್ಲೇ ಭೂ ಗುರುತ್ವದಿಂದ ಕಳಚಿಕೊಂಡು ಸ್ವತಂತ್ರವಾಗುತ್ತವೆ. ಉದಾಹರಣೆಗೆ 2006RH120 ಎಂಬೊಂದು ಮಿನಿ ಚಂದ್ರ 9 ತಿಂಗಳ ಕಾಲ ಭೂಮಿಯ ಸಂಗಾತಿಯಾಗಿ ಉಳಿದಿತ್ತು; 2023CD3 ಎಂಬ ಮತ್ತೊಂದು ಮಿನಿ ಚಂದ್ರ ಮೂರು ವರ್ಷ ಕಾಲ ಧರೆಯೊಡನೆ ಇದ್ದು ದೂರವಾಯಿತು.
- **ಕ್ವಾಸಿ ಚಂದ್ರ (ಅರೆ ಚಂದ್ರ):** ಇವೂ ಕೂಡ ಚಿಕ್ಕ ಚಿಕ್ಕ ಗಾತ್ರದ ಕ್ಷುದ್ರ ಗ್ರಹಗಳೇ ಆದರೂ ಇವು ಭೂ ಗುರುತ್ವದ ಬಂಧಕ್ಕೆ ಒಳಗಾಗುವುದಿಲ್ಲ. ಅವು ಭೂಮಿಯನ್ನು ಪರಿಭ್ರಮಿಸುವುದೂ ಇಲ್ಲ. ಇಂಥ ಕುಬ್ಜ ಕಾಯಗಳು ಭೂಮಿಯ ಸನಿಹದಲ್ಲೇ ಇದ್ದು ಭೂಮಿಯ ವೇಗದಲ್ಲೇ ಸೂರ್ಯನನ್ನು ಪರಿಭ್ರಮಿಸುತ್ತವೆ. ಭೂಮಿಯ ಚಂದ್ರರಂತೆಯೇ ತೋರುವ ಇವೂ ಕೂಡ ಧರೆಗೆ ಶಾಶ್ವತ ಸಂಗಾತಿಗಳಾಗಿ ಉಳಿಯುವುದಿಲ್ಲ. ಇಂತಹ ಏಳನೆಯ ಒಂದು ಕ್ವಾಸಿ ಚಂದ್ರ 2025PN7 ಇದೇ ಕಳೆದ ಆಗಸ್ಟ್ 29ರಂದು ಪತ್ತೆಯಾಯಿತು. ಭೂಮಿಯ ಎರಡನೇ ಚಂದ್ರ ಎಂದು ಈಗ ಕೆಲವೇ ದಿನಗಳ ಹಿಂದೆ ಮಾಧ್ಯಮಗಳಲ್ಲಿ ವರದಿಯಾದ ಕಾಯ ಇದೇ.
- **ಟ್ರೋಜನ್ ಚಂದ್ರರು:** ಸೂರ್ಯನ ಸುತ್ತಲಿನ ಭೂಮಿಯ ಪಥದಲ್ಲೇ ಭೂಮಿಯ ಹಿಂದೆ ಅಥವಾ ಮುಂದೆ ಕೆಲ ಕ್ಷುದ್ರಗ್ರಹಗಳು ಬಂದು ಸೇರಿಕೊಳ್ಳುತ್ತವೆ; ಭೂ ಮಿ ಯ ವೇ ಅನುಯಾಯಿಗಳಂತೆ ಅವೂ ಸೂರ್ಯನನ್ನು ಸುತ್ತುತ್ತವೆ. ಅವೇ ಟ್ರೋಜನ್ ಚಂದ್ರರು. ಇಂತಹ ಎರಡು ಚಂದ್ರರು ಈವರೆಗೆ ಪತ್ತೆಯಾಗಿವೆ. ಇವೇ ಅಲ್ಲದೆ ಅಂತರಿಕ್ಷ ದೂಳು ಒಟ್ಟಾದ ದಟ್ಟ ಮೋಡಗಳೂ ಭೂಮಿಯನ್ನೇ ಅನುಸರಿಸುತ್ತ ಸೂರ್ಯನನ್ನು ಸುತ್ತುತ್ತವೆ.ಚಂದ್ರವೊಂದರ ನೆರಳಿನಂತೆ ಕಾಣುವ ಇವೇ ಭೂತ ಚಂದ್ರರು (ಘೋಸ್ಟ್ ಮೂನ್ಸ್).




- **ಕೃತಕ ಚಂದ್ರರು:** ಧರೆಯ ಸುತ್ತಲಿನ ಮಾನವ ನಿರ್ಮಿತ ಕೃತಕ ಉಪಗ್ರಹಗಳೆಲ್ಲವೂ ಈ ಗುಂಪಿಗೆ ಸೇರುತ್ತವೆ. 25 ಅಕ್ಟೋಬರ್ 2025ರಲ್ಲಿದ್ದಂತೆ ಭೂಮಿಯ ಸುತ್ತ ಒಟ್ಟು 16,252 ಕೃತಕ ಉಪಗ್ರಹಗಳಿವೆ. ಆ ಪೈಕಿ 1800 ಉಪಗ್ರಹಗಳು ಕ್ರಿಯಾಶೀಲವಾಗಿದ್ದು ಇನ್ನೆಲ್ಲವೂ ಮೃತವಾಗಿವೆ. ಅಷ್ಟೇ ಅಲ್ಲದೆ 10 ಸೆಂ.ಮೀ.ಗಿಂತ ಅಧಿಕ ಉದ್ದದ 50,000 ಅಂತರಿಕ್ಷ ಕಸದ ಚೂರುಗಳು ಭೂಮಿಯನ್ನು ಪರಿಭ್ರಮಿಸುತ್ತಿವೆ. ಇವೂ ಕೂಡ ಭೂಮಿಗೆ ಚಂದ್ರರಂತೆಯೇ ಆಗಿವೆ.

■ ಎನ್. ವಾಸುದೇವ್